ದಿನಾಂಕ: 16.07.2022ರಂದು ಬೆಳಿಗ್ಗೆ 10.00 ಗಂಟೆಗೆ ಶಿವನಗರ ವಾರ್ಡ್ ನಂ. 107 ರಲ್ಲಿ ನೋಡಲ್ ಅಧಿಕಾರಿಯವರಾದ ಶ್ರೀ ಲಿಂಗಣ್ಣ ಗುಂಡಳ್ಳಿ, ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರವನ್ನು ದಿನಾಂಕ: 18.07.2022ರಂದು ಸಲ್ಲಿಸುವ ಕುರಿತು.

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಪೂಜಾರಪ್ಪ, ಸಹಾಯಕ ಅಭಿಯಂತರರು, ವಾರ್ಡ್ ನಂ. 107 ಶಿವನಗರ
2. ಶ್ರೀ ಶಿವಕುಮಾರಯ್ಯ, ಹಿರಿಯ ಆರೋಗ್ಯ ಪರಿವೀಕ್ಷಕರು
3. ಶ್ರೀ ಸುಬ್ರಮಣಿ, ಅಸಸರು,
4. ಶ್ರೀಮತಿ ವರಲಕ್ಷ್ಮಿ,
5. ಶ್ರೀ ಅನಿಕೇಶ್, ಹಿರಿಯ ಆರೋಗ್ಯ ಪರಿವೀಕ್ಷರು
6. ಶ್ರೀ ಪವನ್. ಕೆ.ಎಂ. ಬಿ.ಡಬ್ಲ್ಯು.ಎಸ್.ಎಸ್.ಬಿ.
7. ಶ್ರೀ ಮಹೇಶ್,
8. ಶ್ರೀ ರಮೇಶ್.ಎಸ್.ಟಿ. ಪಶು ವೈದ್ಯಾಧಿಕಾರಿ
9. ಶ್ರೀ ರಾಹುಲ್‌ದೇವ್
10. ಶ್ರೀ ಕೇಶವ ಮೂರ್ತಿ,
11. ಶ್ರೀ ಎಸ್.ಆರ್. ಪ್ರದೀಪ್ ಕುಮಾರ್,
12. ಶ್ರೀ ಎಸ್. ವಿಜಯಕುಮಾರ್
13. ಶ್ರೀ ಪ್ರತೀಕ್ ತೋರಿ
14. ಶ್ರೀ ಮಂಜುನಾಥ್
15. ಶ್ರೀ ಬಿ.ಎಂ. ಜೆ. ಬಾಲು
16. ಶ್ರೀ ಮಧುಸೂಧನ್
17. ಶ್ರೀ ನಟರಾಜ್,
18. ಶ್ರೀ ವಿಜಯಕುಮಾರ್, ಮಾಜಿ ಸದಸ್ಯರು
19. ಶ್ರೀ ವೈಜೆ. ವಸಂತ್ ಕುಮಾರ್
20. ಶ್ರೀ ಕಾಳಪ್ಪ
21. ಶ್ರೀ ಲಿಂಗನ ಗೌಡ

ಶ್ರೀ ಪೂಜಾರಪ್ಪ, ಸಹಾಯಕ ಕಾರ್ಯದರ್ಶಿಗಳು ಹಾಗೂ ಸಂಚಾಲಕರು, ವಾರ್ಡ್ ನಂ. 107ರವರು ಸಭೆಗೆ ಆಗಮಿಸಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಈ ಕೆಳಗಿನ ಅಂಶಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

1. ಶಿವನಗರ ವ್ಯಾಪ್ತಿಯಲ್ಲಿ ಬರುವ ರಾಜಾಜಿನಗರ 3ನೇ ಬ್ಲಾಕ್ ಪ್ರದೇಶ ವ್ಯಾಪ್ತಿಯಲ್ಲಿ ಬಿ.ಡಬ್ಲ್ಯು.ಎಸ್.ಎಸ್.ಬಿ. ರವರ ಕುಡಿಯುವ ನೀರಿನ ಕೊಳವೆಯಲ್ಲಿ ಸೀವೇಜ್ ನೀರು ಮಿಶ್ರಣಗೊಂಡು ದುರ್ವಾಸನೆ ಬಂದು ಕುಡಿಯುವ ನೀರು ಯೋಗ್ಯವಾಗಿರುವುದಿಲ್ಲವೆಂದು ಸಭೆಗೆ ತಿಳಿಸಿರುವ ಮೇರೆಗೆ, ಸಭೆಯಲಿ ಹಾಜರಿದ್ದ ಶ್ರೀ ರಾವುಲ್ ದೇವ್ , ಬಿ.ಡಬ್ಲ್ಯು.ಎಸ್.ಎಸ್.ಬಿ. ರವರು ಸದರಿ ಪ್ರದೇಶದಲ್ಲಿ ಪರಿಶೀಲನೆ ಕೆಲಸ ಪ್ರಗತಿಯಲ್ಲಿರುತ್ತದೆ. ರಸ್ತೆ ಕತ್ತರಿಸುವ ವಿಚಾರದಲ್ಲಿ ಸ್ಥಳೀಕರಿಂದ ದೂರು ಬಂದ ಹಿನ್ನಲೆಯಲ್ಲಿ ಬಿ.ಬಿ.ಎಂ.ಪಿ. ಕಚೇರಿಗೆ ರಸ್ತೆ ಕತ್ತರಿಸಲು ಅನುಮತಿಗಾಗಿ ಪತ್ರ ನೀಡಿರುತ್ತೇವೆ ಎಂದು ಸಭೆಗೆ ತಿಳಿಸಿದಾಗ ವಾರ್ಡ್ ಅಭಿಯಂತರರು ಸದರಿ ಕೆಲಸ ತುರ್ತು ಇರುವ ಹಿನ್ನಲೆಯಲ್ಲಿ ಕೆಲಸ ಪ್ರಾರಂಭಿಸಲು ಸಭೆಗೆ ತಿಳಿಸಿರುತ್ತಾರೆ. ತದನಂತರ ಅನುಮತಿ ಪತ್ರದ ಆಧಾರದ ಮೇಲೆ ಕೆಲಸ ನಿರ್ವಹಿಸಿರುವ ಜಾಗಗಳಲ್ಲಿ ತುರ್ತಾಗಿ ಸೂಕ್ತ ಸಾಮಾಗ್ರಿಗಳೊಂದಿಗೆ ಗುಂಡಿ ಮುಚ್ಚಿ ಗಟ್ಟಿಗೊಳಿಸಲು ಸಭೆಯಲ್ಲಿ ತಿಳಿಸಲಾಗಿದೆ.

ಪು.ತಿ.ನೋ.

Scanned by CamScanner

2. ಶಿವನಗರ ವ್ಯಾಪ್ತಿಯಲ್ಲಿ ಬರುವ ರಾಜಾಜಿನಗರ 3ನೇ ಬ್ಲಾಕ್ ಪ್ರದೇಶ ವ್ಯಾಪ್ತಿಯಲ್ಲಿ ಕೆ.ಇ.ಬಿ. ಬೆಸ್ಕಾಂ ಆವರಣದ ಗೋಡೆಯ ಪಕ್ಕ ಸುಮಾರು ವರ್ಷಗಳಿಂದ ಬೆಸ್ಕಾಂ ಕಂಬಗಳು ಇಕ್ಕೆಲಗಳಲ್ಲಿ ಬಿದ್ದಿದ್ದು, ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತದೆ ಎಂದು 3ನೇ ಬ್ಲಾಕ್‌ನ ಸಾರ್ವಜನಿಕರು ತಿಳಿಸಿರುವ ಮೇರೆಗೆ ಸ್ಥಳದಲ್ಲಿದ್ದ ಬೆಸ್ಕಾಂ ಅಭಿಯಂತರರು ಸಭೆಗೆ ಪೂರ್ಣ ಪ್ರಮಾಣದಲ್ಲಿ ಕಂಬಗಳನ್ನು ತೆರವುಗೊಳಿಸಲು ಕ್ರಮ ವಹಿಸುತ್ತೇವೆ ಎಂದು ತಿಳಿಸಿರುತ್ತಾರೆ. ಅದರಂತೆ ಪುನಃ ಬೆಸ್ಕಾಂ ಅಧಿಕಾರಿಗಳಿಗೆ ತುರ್ತಾಗಿ ತೆರವುಗೊಳಿಸಲು ಮತ್ತೊಮ್ಮೆ ಸೂಚಿಸಲಾಗಿದೆ.

3. ಶಿವನಗರ ವ್ಯಾಪ್ತಿಯಲ್ಲಿ ಬರುವ ರಾಜಾಜಿನಗರ ಪ್ರದೇಶ ವ್ಯಾಪ್ತಿಯಲ್ಲಿ ಪ್ರಸ್ತುತ ದಿನಗಳಲ್ಲಿ ಮಳೆ ಬಿದ್ದು, ರಸ್ತೆ ಹದಗೆಟ್ಟಿರುವುದನ್ನು ಸದಸ್ಯರು ಸಭೆಗೆ ತಿಳಿಸಿದಾಗ ಸಭೆಯಲ್ಲಿ ಹಾಜರಿದ್ದ ವಾರ್ಡ್ ಅಭಿಯಂತರರು ಈಗಾಗಲೇ ರಸ್ತೆ ಗುಂಡಿ ಮುಚ್ಚುವ ಕೆಲಸ ಮುಗಿದಿದ್ದು, 13, 14ನೇ ಮುಖ್ಯ ರಸ್ತೆ, ರಾಜಾಜಿನಗರ ಮತ್ತು ಮಹಾಗಣಪತಿನಗರ ಹಾಗೂ ಮಂಜುನಾಥನಗರದ 1ನೇ ಮುಖ್ಯ ರಸ್ತೆಯಲ್ಲಿ ಡಾಂಬರೀಕರಣ ಮಾಡಲು ಅಂದಾಜು ಪಟ್ಟಿ ಅನುಮೋದನೆಗೊಂಡಿರುತ್ತದೆ. ಸದರಿ ಕೆಲಸವನ್ನು ಪ್ರಾರಂಭಿಸಲು ಪ್ರತಿ ದಿನ ಮಳೆ ಬೀಳುವುದರಿಂದ ಡಾಂಬರೀಕರಣ ಮಾಡಲು ಸಾಧ್ಯವಾಗಿರುವುದಿಲ್ಲ. ಮಳೆ ನಿಂತ ತಕ್ಷಣ ಕೆಲಸ ಮಾಡಲು ಕ್ರಮ ವಹಿಸಲಾಗುವುದು.

ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 107

ಸಹಿ/-
ಶ್ರೀ ಲಿಂಗಣ್ಣ ಗುಂಡಳ್ಳಿ
ನೋಡಲ್ ಅಧಿಕಾರಿಗಳು

Scanned by CamScanner